ದಿನಾಂಕಃ 18.06.2025 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಹೆ ವಕೀಲರಿಂದಃ

1.ನಾನು ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮತ್ತು ಎದುರುದಾರರು ಒಂದೇ ಊರಿನವರು ಎಂದರೆ ಸರಿ. ಮದುವೆಯಾಗುವ 4 ವರ್ಷಗಳಿಂದ ಪ್ರೀತಿಸುತ್ತಿದ್ದೆವು. ಮದುವೆಗೆ ನಮ್ಮ ಮನೆಯವರು ಯಾವುದೇ ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯವರು ಮದುವೆಯ ವೆಚ್ಚವನ್ನು ಭರಿಸಿರುತ್ತಾರೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮದುವೆ ನಂತರ ನಮ್ಮ ಸಂಸಾರದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ ಎಂದರೆ ಇತ್ತು ಅನುಸರಿಸಿಕೊಂಡು ಹೋಗುತ್ತಿದ್ದೆ. ಎದುರುದಾರರು 2ನೇ ಮಗು ಜನಿಸಿದ ನಂತರ ನಮ್ಮ ಮನೆಗೆ ಬಂದು ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರರು ಇನ್ನೊಬ್ಬ ಹೆಂಗಸಿನೊಂದಿಗೆ ಓಡಾಡುತ್ತಿರುವುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರದ ಬಗ್ಗೆ ಪಂಚಾಯತಿ ಆಗಿರುತ್ತದಾ ಎಂದರೆ ಆಗಿರುತ್ತದೆ. ಎದುರುದಾರರು ಇನ್ನೊಬ್ಬ ಹೆಂಗಸಿನೊಂದಿಗೆ ವಾಸವಿದ್ದಾರ ಎಂದು ತಿಳಿಸಿದ್ದು ಯಾವ ವಿಳಾಸದಲ್ಲಿ ವಾಸಇದ್ದಾರೆ ಎಂದರೆ ಹಾಸನದ ವಿಜಯನಗರ ಬಡಾವಣೆ. ವಿಜಯನಗರ ಬಡಾವಣೆ ಯಲ್ಲಿ ಯಾರ ಮನೆಯಲ್ಲಿ ವಾಸವಿದ್ದರು ಎಂದರೆ ಮಾಲೀಕರ ಹೆಸರು ಗೊತ್ತಿರುವುದಿಲ್ಲ,

ಆದರೆ ಮನೆ ಗೊತ್ತಿರುತ್ತದೆ. ನಿಪಿ–7 ನ್ನು ಎದುರುದಾರರ ಮೇಲೆ ಒತ್ತಡ ಹೇರಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಯುವತಿಯ ಮೇಲೆ ಯಾವುದಾದರೂ ದೂರು ದಾಖಲಿಸಿದ್ದೀರಾ ಎಂದರೆ ಇಲ್ಲ. 2. ಒಡವೆಗಳು ನನಗೆ ಸೇರಿದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ. ಸೊಸೈಟಿಯಲ್ಲಿ ನನ್ನ ಹೆಸರಿನಲ್ಲಿ ಸಾಲ ಮಾಡಿರುತ್ತೇನೆ ಎಂದರೆ ಸರಿ. ಸದರಿ ಹಣವನ್ನು ಎದುರುದಾರರಿಗೆ ನೀಡಿರುತ್ತೇನೆ. ನಾನು ನಮ್ಮ ಊರಿನ ಮಧು ರವರೊಂದಿಗೆ ಓಡಾಡುತ್ತಿದ್ದೇನೆ ಎಂದು ಎದುರುದಾರರೊಂದಿಗೆ ನಾನೇ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗಲಾಟೆಗೆ ಸಂಬಂಧಪಟ್ಟಂತೆ ಎದುರುದಾರರು ನಮ್ಮ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

1. ಎದುರುದಾರರು ನನ್ನನ್ನು ಮತ್ತು ಮಕ್ಕಳನ್ನು ಅವರು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಮೊದಲು ನೋಡಿಕೊಳ್ಳುತ್ತಿದ್ದರು, 2ನೇ ಮಗು ಜನಿಸಿದ ನಂತರ ನೋಡಿಕೊಂಡಿರುವುದಿಲ್ಲ. ಎದುರುದಾರರು ನಮ್ಮನ್ನು ನೋಡಲು ಬಂದಾಗ ನಾನೇ ಅವರಿಗೆ ಬೈದು ಕಳಿಸಿರುತ್ತೇನೆ ಎಂದರೆ ಸರಿಯಲ್ಲ.

2. ಎದುರುದಾರರು ಚಾಲಕ ವೃತ್ತಿಯಲ್ಲಿದ್ದಾರೆ ಎಂದು ತಿಳಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಶುಂಠಿ ಮಾರಾಟ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ 5 ಲಕ್ಷ ವರಮಾನ ಇರುವುದಿಲ್ಲ ಎಂದರೆ ಸರಿಯಲ್ಲ.

ಎದುರುದಾರರಿಗೆ 5 ಲಕ್ಷ ಹಣ ವರಮಾನ ಇದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಬೇರೆಯವರೊಂದಿಗೆ ಕಂಟ್ರಾಕ್ಟ್ ಮಾಡಿಸುತ್ತಿಲ್ಲ ಎಂದರೆ ಸರಿಯಲ್ಲ.

3. ನಾನು ಹಾಸನದ ಜಾಕಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆನರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿರುತ್ತೇನೆ. ಸದರಿ ಖಾತೆಗೆ ಸಂಬಂಧಿಸಿದ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನನಗೆ ತಿಂಗಳಿಗೆ ರೂ. 15,000.00 ಸಂಬಳ ಬರುತ್ತಿದೆ ಎಂದರೆ ಸರಿಯಲ್ಲ.

4. ದಿಃ 22-05-2022 ರಂದು ನಡೆದ ಗಲಾಟೆಯಲ್ಲಿ ಎದುರುದಾರರಿಗೆ ಕಾಲು ಮುರಿದಿದೆ ಎಂದರೆ ಸರಿಯಲ್ಲ. ಎದುರುದಾರರು ಒಂದು ತಿಂಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎದರುದಾರರು ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ.

5. ಎದುರುದಾರರು ಈಗ ಎಲ್ಲಿ ವಾಸವಾಗಿರುತ್ತಾರೆ ಎಂದರೆ ಬೆಕ್ಕಡಿ ಗ್ರಾಮದಲ್ಲಿ. 2022 ರಿಂದಲೂ ಎದುರುದಾರರು ಬಿಕ್ಕಡಿ ಗ್ರಾಮದಲ್ಲಿ ಇರುತ್ತಾರೆ ಎಂದರೆ ಸರಿ. ಎದುರುದಾರರು ಕಾಲು ಮುರಿದಿರುವುದನ್ನು ಗಮನಿಸಿದ್ದೀರಾ ಎಂದರೆ ಇಲ್ಲ ಸಾಕ್ಷಿ ಮುಂದುವರೆದು ಮನೆಗೆ ಹೋದರೆ ನನ್ನನ್ನು ಸೇರಿಸುತ್ತಿಲ್ಲ. ಅವರ ಮನೆ ಬಳಿ ಹೋದಾಗ ಎದುರುದಾರರ ಕಾಲನ್ನು ಗಮನಿಸಿದ್ದೀರಾ ಎಂದರೆ ಎದುರುದಾರರೇ ನನ್ನನ್ನು ಮತ್ತು ನನ್ನ ಮಕ್ಕಳನ್ನು

ಮನೆಯಿಂದ ಆಚೆ ಹಾಕಿರುತ್ತಾರೆ.

6. 2022 ರಿಂದ ಎದುರುದಾರರು ಅವರ ಚಿಕಿತ್ಸೆಗಾಗಿ 4 ಲಕ್ಷ ಸಾಲ ಮಾಡಿಕೊಂಡಿರುತ್ತಾರೆ ಎಂದೆರ ಸರಿಯಲ್ಲ.ನಾನು ಎದುರುದಾರರ ಯೋಗಕ್ಷೇಮ ನೋಡಿರುವುದಿಲ್ಲ ಎಂದರೆ ನನ್ನನ್ನು ಅವರು ಮನೆಗೆ ಸೇರಿಸಿರುವುದಿಲ್ಲ. ಗಲಾಟೆಯಾದ ನಂತರದಲ್ಲಿ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದೆರ ಸರಿಯಲ್ಲ.ಎದುರುದಾರರು ಮತ್ತೊಂದು ಮದುವೆಯಾಗಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲಾತಿ ಇದೆಯೇ ಎಂದರೆ ಇಲ್ಲ. ಎದುರುದಾರರು ಮತ್ತೊಂದು ಯುವತಿಯೋಂದಿಗೆ ಇದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದೆರ ಸರಿಯಲ್ಲ. ಎದುರುದಾರರು ನಮ್ಮ ಮನೆಗೆ ಬಂದು ನನ್ನನ್ನು ಬಹಳ ಸರಿ ಕರೆದಿರುತ್ತಾರೆ ಎಂದೆರ ಸರಿಯಲ್ಲ.ಈಗಲೂ ಎದುರುದಾರರು ನನ್ನೊಂದಿಗೆ ಸಂಸಾರ ಮಾಡಲು ಸಿದ್ದರಾಗಿರುತ್ತಾರೆ ಎಂದೆರ ಸರಿಯಲ್ಲ. ನಾನೇ ಅವರೊಂದಿಗೆ ಸಂಸಾರ ಮಾಡಲು ತಿರಸ್ಕರಿಸುತ್ತಿದ್ದೇನೆ ಎಂದೆರ ಸರಿಯಲ್ಲ.

7. 2 ಮತ್ತು 3ನೇ ಅರ್ಜಿದಾರರ ವಿದ್ಯಾಭ್ಯಾಸವನ್ನು ಎದುರುದಾರರೇ ನೊೇಡಿಕೊಳ್ಳುತಿದ್ದರು ಎಂದೆರ ಸರಿಯಲ್ಲ. ಅವರ ವಿದ್ಯಾಭ್ಯಾಸವನ್ನು ನಾನೇ ನೋಡಿಕೊಳ್ಳಲು ನನಗೆ ಯಾವುದೇ ವರಮಾನ ಇರುವುದಿಲ್ಲ ಎಂದರೆ ನನ್ನ ತಂದೆ ತಾಯಿ ನೊೇಡಿಕೊಳ್ಳುತ್ತಿದ್ದಾರೆ. ನನ್ನ ತಂದೆ ವ್ಯವಸಾಯ ಮಾಡುತ್ತಾರೆ. ನನ್ನ ಯೋಗಕ್ಷೇಮವನ್ನು ಎದುರುದಾರರೇ ನೋಡಿಕೊಳ್ಳುತ್ತಾರೆ ಎಂದೆರ ಸರಿಯಲ್ಲ.

8. ಎದುರುದಾರರ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇರುವುದಿಲ್ಲ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.